

ಹೇಳುವವನಂತೆ ಬಿಚ್ಚಿಟ್ಟಿದ್ದ.

ಗೆಸ್ಟ್ ಹೌಸಿನಲ್ಲಿನ ಕೇರ್ ಟೇಕರ್ ಎರಡು ಗ್ಲಾಸುಗಳಲ್ಲಿ ಗ್ಲೆನ್ಫಿಡಿಚ್ ವಿಸ್ಕಿಯನ್ನು ಸೋಡಾ ನೀರಿನೊಂದಿಗೆ ಬೆರೆಸಿ ಟೇಬಲ್ಲಿಗೆ ತಂದಿಟ್ಟು, ತಿನ್ನಲು ಹುರಿದ, ಬೇಯಿಸಿದ ಶೇಂಗಾ ಬೀಜ ಮತ್ತು ಬಿಸಿ ಬಿಸಿ ಅಂಜಲ್ ಫಿಶ್ ತವ್ವಾ ಫ್ರೈ ತಂದಿಟ್ಟಿದ್ದ. ಚಿಯರ್ಸ್ ಹೇಳಿ ನಾನು ಒಂದು ಗುಟುಕು ವಿಸ್ಕಿ ಹೀರಿ, ಒಂದು ಧಂ ಸಿಗರೇಟು ಎಳೆದು, ''ಮೈ ಡಿಯರ್ ಡಿಕ್ಯಾಸ್ಟ್ರೊ ಆವತ್ತು ಇಬ್ರಾಹಿಂ ಮನೆಗೆ ಹೋಗಿ ಊಟ ಮಾಡಿ ರಾತ್ರಿ ಮಲಗಿದಾಗ ಸುಲೆಮಾನ್ ಏನು ಮಾಡಿದ್ದನಂತೆ ಗೊತ್ತಾ? ಸಣ್ಣ ಗುಂಡು ಕಲ್ಲಿನಿಂದ ಬೀಡಿ ಸೇದಲು ಬಳಸುವ ಬಲಗೈನ ಎರಡು ನಡು ಬೆರಳುಗಳನ್ನು ರಕ್ತ ಬರುವಂತೆ ಜಜ್ಜಿದ್ದನಂತೆ. ಅಳುತ್ತಿದ್ದ ಇಬ್ರಾಹಿಂನನ್ನು ಭುಜಕ್ಕೆ ಹಾಕಿಕೊಂಡು ಅವನಮ್ಮ ಗಾಯಕ್ಕೆ ಟಿಂಚರ್ ಕೇಳಿಕೊಂಡು ಊರೆಲ್ಲಾ ಅಲೆದಳಂತೆ. ಕಡೆಗೆ ಅಷ್ಟೊತ್ತಿನಲ್ಲಿ ಯಾರದೋ ಬೈಕ್ ಮೇಲೆ ಸುಲೆಮಾನನೇ ಇಬ್ರಾಹಿಂನನ್ನು ಮತ್ತು ಹೆಂಡತಿಯನ್ನು ಕೂರಿಸಿಕೊಂಡು ಚಿಕ್ಕಮಗಳೂರಿಗೆ ಹೋಗಿ ಆಸ್ಪತ್ರೆಯಲ್ಲಿ ತೋರಿಸಿ ಔಷಧಿ ಮಾಡಿಸಿಕೊಂಡು ಬಂದನಂತೆ. ಮಾರನೆಯ ದಿನ ಸಂಜೆ ನಿಮ್ಮ ಮನೆಯಲ್ಲಿ ಕೆಲಸ ಮುಗಿಸಿ ಬಂದ ಅಮ್ಮ ಅಪ್ಪನ ಹತ್ತಿರ ವಿಷಯ ಹೇಳುತ್ತಿದ್ದಾಗ ನಾನು ಕೇಳಿಸಿಕೊಂಡಿದ್ದೆ...''
ಮಾತು ನಿಲ್ಲಿಸಿ ವಿಸ್ಕಿಯನ್ನು ಹೀರಿ ಫಿಶ್ ಫ್ರೈ ಪೀಸನ್ನು ಬಾಯಿಗಿಟ್ಟುಕೊಂಡಿದ್ದೆ. ''ಛೇ, ರಿಯಲಿ ಐ ವಾಸ್